ಸ್ಥಾಪನೆ : 1907

# ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ,
ಚಾಮರಾಜಪೇಟೆ, ಬೆಂಗಳೂರು–18

**Ref : BCCB / EST / 1043 / 2016-17** **DATE : 31.03.2017**

## ಅರ್ಹ ಅಭ್ಯರ್ಥಿಗಳಿಂದ 'ಕಿರಿಯ ಸಹಾಯಕರು' ಮತ್ತು 'ಅಟೆಂಡರ್' ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸುತ್ತಿದೆ.

| | |
|---|---|
| 1. ಹುದ್ದೆಗಳ ಸಂಖ್ಯೆ : | i) ಕಿರಿಯ ಸಹಾಯಕರು 63 (ಅರವತ್ಮೂರು)<br>ii) ಅಟೆಂಡರ್ 11 (ಹನ್ನೊಂದು) |
| 2. ವಿದ್ಯಾರ್ಹತೆ : | i) ಕಿರಿಯ ಸಹಾಯಕರ ಹುದ್ದೆಗೆ ಅಂಗೀಕೃತ ವಿಶ್ವವಿದ್ಯಾನಿಲಯದಿಂದ ಯಾವುದೇ ಪದವಿ<br>ii) ಅಟೆಂಡರ್ ಹುದ್ದೆಗೆ ಎಸ್.ಎಸ್.ಎಲ್.ಸಿ ತರಗತಿಯವರೆವಿಗೂ ಕನಿಷ್ಠ ವಿದ್ಯಾರ್ಹತೆಯಾಗಿರುತ್ತದೆ. |
| 3. ವಯೋಮಿತಿ : | ದಿನಾಂಕ : 26.04.2017 ರಲ್ಲಿದ್ದಂತೆ ಕನಿಷ್ಠ : 18 ವರ್ಷ<br>ಗರಿಷ್ಠ :<br>A) ಪರಿಶಿಷ್ಠ ಜಾತಿ / ಪರಿಶಿಷ್ಠ ವರ್ಗ / ಪ್ರವರ್ಗ–1 ರವರಿಗೆ 40 ವರ್ಷಗಳು<br>B) ಹಿಂದುಳಿದ ಜಾತಿ ಮತ್ತು ಹಿಂದುಳಿದ ವರ್ಗದವರಿಗೆ 38 ವರ್ಷಗಳು<br>C) ಇತರೆ ಅಭ್ಯರ್ಥಿಗಳಿಗೆ 35 ವರ್ಷಗಳು |
| 4, ಅಗತ್ಯ ಅರ್ಹತೆ : | ಅಭ್ಯರ್ಥಿಗಳು ಕರ್ನಾಟಕ ನಿವಾಸಿಗಳಾಗಿದ್ದು, ಕನ್ನಡ ಭಾಷೆ ಬರೆಯಲು ಮತ್ತು ಓದಲು ಬಲ್ಲವರಾಗಿರಬೇಕು. |
| 5. ಆದ್ಯತೆ : | **ಕಿರಿಯ ಸಹಾಯಕರು ಹುದ್ದೆಗೆ :**<br>i) ಬ್ಯಾಂಕಿಂಗ್ ಕ್ಷೇತ್ರದಲ್ಲಿನ ಕಂಪ್ಯೂಟರ್ ಜ್ಞಾನ ಹೊಂದಿದವರು<br>ii) ಡಿಪ್ಲೋಮಾ ಇನ್ ಸೆಕ್ರೆಟರಿಯಲ್ ಪ್ರಾಕ್ಟೀಸ್ ಅಥವಾ ಡಿಪ್ಲೋಮಾ ಇನ್ ಬ್ಯಾಂಕಿಂಗ್ ಅಥವಾ ಡಿಪ್ಲೋಮಾ ಇನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಪರೀಕ್ಷೆಗಳಲ್ಲಿ ತೇರ್ಗಡೆಯಾದವರು.<br>iii) ಸಹಕಾರಿ ಬ್ಯಾಂಕುಗಳಲ್ಲಿ ಕೆಲಸ ಮಾಡಿದ ಅನುಭವವುಳ್ಳವರು<br>ಅಟೆಂಡರ್ ಹುದ್ದೆಗೆ :<br>i) ಸಹಕಾರಿ ಬ್ಯಾಂಕುಗಳಲ್ಲಿ ಕೆಲಸ ಮಾಡಿದ ಅನುಭವವುಳ್ಳವರು |

| | |
|---|---|
| **6) ಅರ್ಜಿ ಸಲ್ಲಿಕೆಯ ವಿಧಾನ ಮತ್ತು ಸಲ್ಲಿಕೆಗೆ ಕೊನೆಯ ದಿನಾಂಕ :** | ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ www.bccbl.co.in ಅಥವಾ www.recruit-app.com/bccbl2017 ಅನ್ನು ತೆರೆದ ಕೂಡಲೇ ಕಂಪ್ಯೂಟರ್ ಪರದೆಯ ಮೇಲೆ **TBCCBANK RECRUITMENT 2017** ಎಂದು ಮೂಡುತ್ತದೆ ಮತ್ತು ಅಧಿಸೂಚನೆ / ಪರೀಕ್ಷಾ ಶುಲ್ಕ ವಿವರಗಳು ಲಭ್ಯವಾಗಲಿದ್ದು, ಅಭ್ಯರ್ಥಿಗಳು ಅಧಿಸೂಚನೆಯಲ್ಲಿನ ವಿವರಗಳನ್ನು ಮತ್ತು ಅರ್ಜಿ ಸಲ್ಲಿಸುವ ಸೂಚನೆಗಳನ್ನು ತಪ್ಪದೇ ಓದಿಕೊಂಡು ಅದರಂತೆ ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Help line) 8951107408 ಅನ್ನು ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 6.00 ಗಂಟೆವರೆಗೆ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು. |

| ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಪ್ರಾರಂಭಿಕ ದಿನಾಂಕ | ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ | ಶುಲ್ಕ ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ |
|---|---|---|
| **05.04.2017** | **26.04.2017** | **27.04.2017** |

7) ನಿಗದಿಪಡಿಸಿದ ಅರ್ಜಿ / ಪರೀಕ್ಷಾ ಶುಲ್ಕ :

| | ಕಿರಿಯ ಸಹಾಯಕರುಗಳು | ಅಟೆಂಡರ್ |
|---|---|---|
| ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಅಂಗವಿಕಲ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ | ರೂ. 400/– | ರೂ. 300/– |
| ಇತರರು | ರೂ. 600/– | ರೂ. 400/– |
| | | |

ಅರ್ಜಿ/ಪರೀಕ್ಷಾ ಶುಲ್ಕದ ಚಲನ್ ಅನ್ನು ಡೌನ್‌ಲೋಡ್ ಮಾಡಿದ ನಂತರ ಕರ್ನಾಟಕ ರಾಜ್ಯದಲ್ಲಿನ ಯಾವುದೇ ಗಣಕೀಕೃ ಭಾರತೀಯ ಅಂಚೆ ಕಛೇರಿಯ ಶಾಖೆಯಲ್ಲಿ (e-payment enabled post offices) ಸಂದಾಯ ಮಾಡಬಹುದು. ಈ ವಿಧಾನವನ್ನು ಹೊರತುಪಡಿಸಿ ಬೇರೆ ರೀತಿಯಲ್ಲಿ ಅರ್ಜಿ/ಪರೀಕ್ಷಾ ಶುಲ್ಕವನ್ನು ಪಾವತಿಸಬಾರದು.

| | |
|---|---|
| 8) ಲಿಖಿತ ಪರೀಕ್ಷೆ ಮತ್ತು ಕರೆ ಪತ್ರಗಳು : | ಲಿಖಿತ ಪರೀಕ್ಷೆಗೆ ಹಾಜರಾಗಲು ಬ್ಯಾಂಕು ತೀರ್ಮಾನಿಸಿದ ಮಾನದಂಡದ ಅನುಗುಣವಾಗಿ ಅರ್ಹ ಅಭ್ಯರ್ಥಿಗಳಿಗೆ ಕರೆ ಪತ್ರಗಳನ್ನು ಕಳುಹಿಸಲಾಗುವುದು. ಕಿರಿಯ ಸಹಾಯಕರುಗಳ ಹುದ್ದೆಯ ಅಭ್ಯರ್ಥಿಗಳು ಕನ್ನಡ, ಆಂಗ್ಲ ಭಾಷೆ, ಸಾಮಾನ್ಯ ಜ್ಞಾನ, ಬ್ಯಾಂಕಿಂಗ್ ಜ್ಞಾನ, ಗಣಿತ ಶಾಸ್ತ್ರ ವಿಷಯಗಳಿಗೆ ಸಂಬಂಧಪಟ್ಟ ಲಿಖಿತ ಪರೀಕ್ಷೆ ಬರೆಯಬೇಕಾಗಿರುತ್ತದೆ. ಅಟೆಂಡರ್ ಹುದ್ದೆಯ ಅಭ್ಯರ್ಥಿಗಳು ಕನ್ನಡ ಭಾಷೆ ಓದಲು / ಬರೆಯುವುದಕ್ಕೆ ಸಂಬಂಧಿಸಿದಂತೆ ಪರೀಕ್ಷೆ ಬರೆಯಬೇಕಾಗಿರುತ್ತದೆ. ಪರೀಕ್ಷೆಯಲ್ಲಿನ ಅವರ ಸಾಧನೆಯ ಆಧಾರದ ಮೇಲೆ ಬ್ಯಾಂಕಿನ ಮಾನದಂಡದಂತೆ ಸಂದರ್ಶನ ಪತ್ರವನ್ನು ಕಳುಹಿಸಲಾಗುವುದು. ಪರೀಕ್ಷೆಯಲ್ಲಿ ಮತ್ತು ಸಂದರ್ಶನದಲ್ಲಿ ಅಭ್ಯರ್ಥಿಗಳ ಸಾಧನೆ ಆಧರಿಸಿ ಮತ್ತು ಅನುಭವ / ಹೆಚ್ಚುವರಿ ಆದ್ಯತೆಯನ್ನು ಆಧರಿಸಿ ಆಯ್ಕೆ ಮಾಡಲಾಗುವುದು. |

| | |
|---|---|
| 9. ವೇತನ ಶ್ರೇಣಿ : | ಕಿರಿಯ ಸಹಾಯಕರು ಹುದ್ದೆ: 20000-500-21000-600-24600-700-28800-800-33600-900-36300<br><br>ಅಟೆಂಡರ್ ಹುದ್ದೆ : 14550-350-15600-400-17200-450-19000-500-21000-600-24600-700-26700<br><br>ಆಡಳಿತ ಮಂಡಳಿಯ ತೀರ್ಮಾನದ ರೀತ್ಯಾ ತುಟ್ಟಿ ಭತ್ಯೆ, ನಗರ ಪರಿಹಾರ ಭತ್ಯೆ, ಮನೆ ಬಾಡಿಗೆ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ನೀಡಲಾಗುವುದು.<br><br>(ಅಂದಾಜು ಪ್ರಾರಂಭಿಕ ಸಂಬಳ ಕಿರಿಯ ಸಹಾಯಕರುಗಳಿಗೆ ರೂ. 35,450/– ಮತ್ತು ಅಟೆಂಡರ್‌ರವರಿಗೆ ರೂ. 25,898/– ಇರುತ್ತದೆ. |
| 10. ಸಾಮಾನ್ಯ ಸೂಚನೆಗಳು : | A) ಅಂಚೆ ಇಲಾಖೆಯಿಂದ ಅಥವಾ ಇನ್ನಾವುದೇ ರೀತಿಯಲ್ಲಿ ಪತ್ರಗಳು ತಲುಪಲು ತಡವಾದರೆ ಅಥವಾ ತಲುಪದಿದ್ದರೆ ಬ್ಯಾಂಕ್ ಜವಾಬ್ದಾರಿಯಾಗಿರುವುದಿಲ್ಲ.<br>B) ಈಗಾಗಲೇ ಕೆಲಸ ಮಾಡುತ್ತಿರುವ ಅಭ್ಯರ್ಥಿಗಳು ಸಂದರ್ಶನದ ಸಂದರ್ಭದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಸ್ಥೆಯಿಂದ (Employer) ನಿರಪೇಕ್ಷಣಾ ಪತ್ರ ಸಲ್ಲಿಸಬೇಕು.<br>C) ಅಭ್ಯರ್ಥಿಗಳು ಪರೀಕ್ಷೆಗೆ ಮತ್ತು ಸಂದರ್ಶನಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿಯೇ ಹಾಜರಾಗಬೇಕಾಗುತ್ತದೆ.<br>D) ಅಭ್ಯರ್ಥಿಗಳ ಅರ್ಹತೆ, ಲಿಖಿತ ಪರೀಕ್ಷೆ, ಸಂದರ್ಶನ ಅಥವಾ ಅಭ್ಯರ್ಥಿಗಳ ಆಯ್ಕೆಯ ವಿಚಾರದಲ್ಲಿ ಆಡಳಿತ ಮಂಡಳಿಯ ತೀರ್ಮಾನವೇ ಅಂತಿಮ, ಈ ಕುರಿತು ಪತ್ರ ವ್ಯವಹಾರವನ್ನು ಮಾನ್ಯ ಮಾಡುವುದಿಲ್ಲ.<br>E) ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳು ಬ್ಯಾಂಕಿನ ಹಾಲಿ ಅಥವಾ ಮುಂದೆ ಪ್ರಾರಂಭಿಸುವ ಕರ್ನಾಟಕ ರಾಜ್ಯದ ಯಾವುದೇ ಶಾಖೆ/ಕಛೇರಿಯಲ್ಲಿ ಕೆಲಸ ಮಾಡಲು ಸಿದ್ಧರಿರಬೇಕು. |

ಸಹಿ/–
(ಎನ್. ಮಂಜುನಾಥ)
ನೇಮಕಾತಿ ಉಪಸಮಿತಿ ಸದಸ್ಯರು ಹಾಗೂ ಪ್ರಧಾನ ವ್ಯವಸ್ಥಾಪಕರು
ದಿ ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ,
ಚಾಮರಾಜಪೇಟೆ, ಬೆಂಗಳೂರು–18